ಮೂಲ ದಾವಾ ಸಂಖ್ಯೆ.132/2016 ಡಿ ಡಬ್ಲ್ಯೂ 2

(ದಿನಾಂಕ 20-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದಃ-

ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಏನು ಬರೆದಿರುತ್ತಾರೆನ್ನುವ ವಿಚಾರ ನನಗೆ ಗೊತ್ತು. ಈ ದಾವೆ ಯಾವ ಹಂತದಲ್ಲಿದೆ ಅಂತಾ ನನಗೆ ಗೊತ್ತಿಲ್ಲ. ನನ್ನ ಪ್ರಮಾಣಪತ್ರದಲ್ಲಿ ಈ ದಾವೆ ಯಾವ ಹಂತದಲ್ಲಿದೆ ಅಂತಾ ಹೇಳಿರುವುದು ನನಗೆ ನೆನಪಿಲ್ಲ. ಈ ದಾವೆಯು ಯಾವ ಹಂತದಲ್ಲಿದೆ ಅಂತಾ ನಾನು ನನ್ನ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿಲ್ಲ.

ನಾನು ಮೂಲತಃ ಬೆಲ್ದಾರ್ ಕೆಲಸ ಮಾಡುತ್ತೇನೆ. ನಾನು ಪ್ರತಿವಾದಿಯರ ಹಳೆ ಮನೆಯ ಎಲ್ಲಾ ರಿಪೇರಿ ಕೆಲಸವನ್ನು ಮಾಡುತ್ತೇನೆಂದರೆ ಸರಿ. ಪ್ರತಿವಾದಿಯರ ಗಂಡನನ್ನು ನಾನು ನೋಡಿರುತ್ತೇನೆ ಅವರು ಸುಮಾರು ವರ್ಷದಿಂದ ಆತ್ಮೀಯರು ಮತ್ತು ಅವರು ನನಗೆ ಸುಮಾರು 18 ವರ್ಷದಿಂದ ಆತ್ಮೀಯರು. ಈ ದಾವೆಯನ್ನು ವಾದಿಯು ದಾಖಲಿಸಿರುತ್ತಾನೆ. ವಾದಿ ಮತ್ತು ಪ್ರತಿವಾದಿಯರು ಯಾವ ದಿನದಂದು ಸೈಟ್ ಖರೀದಿ ಮಾಡಿರುತ್ತಾರೆನ್ನುವುದು ನನಗೆ ಗೊತ್ತು. ಸನ್ 1988 ರಲ್ಲಿ ಗುಣಸಾಗರಮ್ಮ ಇವರು ಸೈಟ್ ಖರೀದಿ ಮಾಡಿರುತ್ತಾರೆ. ಯಾವ ದಿನಾಂಕ ಮತ್ತು ತಿಂಗಳು ನನಗೆ ಗೊತ್ತಿಲ್ಲ. ಸದರಿ ಖರೀದಿ ಸಮಯದಲ್ಲಿ ಅಥವಾ ಖರೀದಿ ಮಾತುಕತೆ ಸಮಯದಲ್ಲಿ ನಾನು ಇರಲಿಲ್ಲ ಮತ್ತು ನಾನು ಸದರಿ ದಾಖಲೆಗೆ ಸಾಕ್ಷಿ ಅಂತಾ ಸಹಿ ಮಾಡಿಲ್ಲ. ವಾದಿ ಮತ್ತು ಪ್ರತಿವಾದಿ ಒಂದೇ ಸಾರಿ ಸನ್ 1988 ರಲಿಲ ಸೈಟುಗಳನ್ನು ಖರೀದಿ ಮಾಡಿರುತ್ತಾರೆಂದರೆ ಸರಿ. ವಾದಿಯು ಸೈಟ್ ಖರೀದಿ ಮಾಡಿದ ತಕ್ಷಣ ಅದರಲ್ಲಿ ಕಾಂಪೌಂಡ್ ಸಹಿತ ಮನೆ ಕಟ್ಟಿಸಿರುತ್ತಾರೆಂದರೆ ಸರಿ. ಪ್ರತಿವಾದಿಯು ಆ ಸಮಯದಲ್ಲಿ ತಮ್ಮ ಸೈಟಿನಲ್ಲಿರುವ ಗುಡಿಸಲು ಮನೆಯಲ್ಲಿ ವಾಸವಾಗಿದ್ದರು, ಅದು ಹೆಂಚಿನ ಮನೆಯಾಗಿತ್ತು. ವಾದಿಯು ಮನೆ ಕಟ್ಟುತ್ತಿರುವ ಸಮಯದಲ್ಲಿ ನಾನು ಅಲ್ಲಿಗೆ ಹೋಗಿ ಬರುವುದನ್ನು ಮಾಡುತ್ತಿರಲಿಲ್ಲ. ಸನ್ 1988 ನೇ ಇಸ್ವಿಯಲ್ಲಿ ವಾದಿ ಮತ್ತು ಪ್ರತಿವಾದಿಯ ನಡುವೆ ಏನು ಮಾತುಕತೆಯಾಯಿತು ಎನ್ನುವುದು ನನಗೆ ಗೊತ್ತಿಲ್ಲ. ಪ್ರತಿವಾದಿಯು ಮನೆ ಕಟ್ಟುವ ಸಲುವಾಗಿ ಗ್ರಾಮ ಪಂಚಾಯ್ತಿಗೆ ಅರ್ಜಿ ನೀಡುವ ಸಮಯದಲ್ಲಿ ನಾನು ಅವರ ಜೊತೆ ಹೋಗಿರಲಿಲ್ಲ. ಪ್ರತಿವಾದಿಯು ಕಟ್ಟಡ ಲೈಸನ್ಸನ್ನು ಪಂಚಾಯ್ತಿಯಿಂದ ಪಡೆಯುವ ಸಮಯದಲ್ಲಿ ನಾನು ಅವರ ಜೊತೆ ಹೋಗಿಲ್ಲ.

ಪ್ರತಿವಾದಿಯು ಹೊಸ ಕಟ್ಟಡವನ್ನು ಕಟ್ಟುವುದನ್ನು ಪ್ರಾರಂಭಿಸಿರುವುದು ನನಗೆ ಗೊತ್ತು. ಸದರಿ ಹೊಸ ಕಟ್ಟಡವನ್ನು ಕಟ್ಟಲು ಗುಣಸಾಗರಮ್ಮ ಇವರು ನಮಗೆ ನೀಡಿರಲಿಲ್ಲ. ಸಾಮಾನ್ಯವಾಗಿ ನಾವು ಕೆಲಸ ಮಾಡುವ ಜಾಗದಲ್ಲಿ ಇನ್ನೊಬ್ಬರು ಬಂದು ಅದೇ ಕೆಲಸದ ಸಲುವಾಗಿ ಅಳತೆ ಮಾಡುವುದು ಮಾಡುವುದಿಲ್ಲ. ಪ್ರತಿವಾದಿ ಮನೆ ಕಟ್ಟುವ ಸಮಯದಲ್ಲಿ ನಾನು ಅಳತೆಯನ್ನು ಮಾಡಿಲ್ಲ. ಪ್ರತಿವಾದಿಯ ಸೈಟಿನ ಉದ್ದ ಅಗಲ ಎಷ್ಟು ಇದೆ ಮತ್ತು ಅವರ ಮನೆಯ

ಉದ್ದ ಅಗಲ ಎಷ್ಟು ಇದೆ ಅಂತಾ ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ಸಾಕ್ಷಿಗೆ ಪ್ರಮಾಣಪತ್ರವನ್ನು ತೋರಿಸಿ ಆ ರೀತಿ ಬರೆದಿದ್ದು ಇದೆಯಾ ಎಂದರೆ ಸಾಕ್ಷಿಯು ಪ್ರಮಾಣಪತ್ರವನ್ನು ನೋಡಿ ಇಲ್ಲವೆಂದು ನುಡಿಯುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆಸಿರುವ ವಿಚಾರ ನನಗೆ ಗೊತ್ತಿಲ್ಲ, ನಾನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಸಾಕ್ಷಿಗೆ ನಿಡಿ-28 ರ ದಾಖಲೆಯನ್ನು ತೋರಿಸಿ ಸದರಿ ಫೋಟೋದಲ್ಲಿ ಫಿಲ್ಲರ್ ಮತ್ತು ಕಾಂಪೌಂಡಿನ ನಡುವೆ 1 ರಿಂದ 1ವರೆ ಅಡಿ ವಿಸ್ತೀರ್ಣ ಇರುತ್ತದೆಂದರೆ ಸಾಕ್ಷಿಯು ಇರಬಹುದು ಎನ್ನುತ್ತಾರೆ. ಮನೆಯನ್ನು ಪಿಲ್ಲರ್ಸ ಮೂಲಕ ಕಟ್ಟಿ ಆರ್ ಸಿ ಸಿ ಹಾಕುವಾಗ ಅದರ ಛಾವಣಿಯನ್ನು 1ವರೆ ಯಿಂದ 3 ಅಡಿಯವರೆಗೆ ಹೊರ ಚಾಚುತ್ತಾರೆಂದರೆ ಸರಿ. ಪ್ರತಿವಾದಿಯರ ಮನೆಯನ್ನು ಇತ್ತೀಚೆಗೆ ನೋಡಿದ್ದೇನೆ. ಪ್ರತಿವಾದಿಯ ಮನೆಯ ಹೊರಗಿನ ಸಜ್ಜ ವಾದಿಯ ಮನೆಯ ಕಡೆ 1ವರೆ ಅಡಿ ಚಾಚಿದೆ.

ಪ್ರತಿವಾದಿಯು ವಾದಿಗೆ ಯಾವ ದಿನಾಂಕ ಮತ್ತು ಸಮಯದಂದು ನೀವು ನಮ್ಮ ಆಸ್ತಿಯಲ್ಲಿ ಅತಿಕ್ರಮಣ ಮಾಡಿ ಕಾಂಪೌಂಡ್ ಕಟ್ಟಿದ್ದೀರಾ ಅಂತಾ ಕೇಳಿರುತ್ತಾರೆಂದರೆ ಸಾಕ್ಷಿಯು ಸುಮಾರು 8 ವರ್ಷದ ಹಿಂದೆ ಕೇಳಿರುತ್ತಾರೆ. ಆ ರೀತಿ ನಾನು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಹೇಳಿರುತ್ತೇನೆ. ಸಾಕ್ಷಿಗೆ ಪ್ರಮಾಣಪತ್ರ ತೋರಿಸಿ ಆ ರೀತಿ ನೀವು ಹೇಳಿಲ್ಲವೆಂದರೆ ಸಾಕ್ಷಿಯು ಪ್ರಮಾಣಪತ್ರ ನೋಡಿ ಹೌದು ಎನ್ನುತ್ತಾರೆ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ವಾದಿಯು ತನ್ನ ಜಾಗದಲ್ಲಿ ಸಂಪು ಮತ್ತು ಲ್ಯಾಟ್ರಿನ್ ಗುಂಡಿಯನ್ನು ಕಟ್ಟಿಕೊಂಡಿರುತ್ತಾರೆಂದರೆ ಸರಿ. ಅವರು ಅದನ್ನು ಸನ್ 1988 ರಲ್ಲಿ ಕಟ್ಟಿರುತ್ತಾರೆಂದರೆ ಅದು ನನಗೆ ಗೊತ್ತಿಲ್ಲ. ನಾನು ಮತ್ತು ಪ್ರತಿವಾದಿಯು ಮೊದಲಿನಿಂದಲೂ ಆತ್ಮೀಯರು ಎಂದರೆ ಸರಿ. ಪ್ರತಿವಾದಿಯು ನನಗೆ ಆತ್ಮೀಯರು ಆಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ